(2)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಂ. ನಾಗರಾಜು ಇವರು ದಿನಾಂಕ: 09.12.2024ರಂದು ಸದನದಲ್ಲಿ ಚರ್ಚಿಸಿರುವ ವಿಷಯಕ್ಕೆ ಉತ್ತರ ಒದಗಿಸುವ ಕುರಿತು.**

ವಿಷಯ :- ಶಾಸಕರ ನಿಧಿ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲದ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್ ರಚಿಸುವ ಬಗ್ಗೆ.

**ಉತ್ತರ :-**

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001-02ನೇ ಸಾಲಿನಿಂದ ಶಾಸಕರ ಸ್ಥಳೀಯ ಪ್ರದೇಶಕ್ಕೆ ಪ್ರಯೋಜನವಾಗುವಂತೆ, ಅಭಿವೃದ್ಧಿ ಕಾಮಗಾರಿಗಳ ಮೂಲಕ ಮೂಲ ಸೌಕರ್ಯಗಳನ್ನು ಒದಗಿಸಲು ರೂ.25.00 ಲಕ್ಷಗಳ ಅನುದಾನದಲ್ಲಿ ಪ್ರಾರಂಭಮಾಡಲಾಗಿದ್ದು, 2006-07ನೇ ಸಾಲಿನಿಂದ ರೂ.25.00 ಲಕ್ಷಗಳಿಂದ ರೂ.100.00 ಲಕ್ಷಗಳಿಗೆ ಹಾಗೂ 2013-14ನೇ ಸಾಲಿನಿಂದ ರೂ.200.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. 2008-09ನೇ ಸಾಲಿನಿಂದ ಸದರಿ ಯೋಜನೆಯನ್ನು ಯೋಜನಾ ಕಾರ್ಯಕ್ರಮಗಳಿಂದ ಯೋಜನೇತರ ಕಾರ್ಯಕ್ರಮಗಳಿಗೆ ವರ್ಗಾಯಿಸಲಾಗಿರುತ್ತದೆ.

ಪ್ರಸ್ತುತ ಪ್ರತಿ ಕ್ಷೇತ್ರಕ್ಕೆ ರೂ.200.00 ಲಕ್ಷಗಳನ್ನು 4 ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು, ವಿಧಾನ ಪರಿಷತ್ ಸದಸ್ಯರುಗಳು ಜಿಲ್ಲಾಧಿಕಾರಿಗಳು ಹಂತದಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರುಗಳು ಕೋರುವಂತೆ ಜಿಲ್ಲಾಧಿಕಾರಿಗಳು / ಉಪ ವಿಭಾಗಾಧಿಕಾರಿಗಳ ಹಂತದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.

ದಿನಾಂಕ: 25/11/2024ರಂದು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಲಾಗಿದೆ. ಆದರಂತೆ, ದಿನಾಂಕ: 01/04/2024ಕ್ಕೆ ಆರಂಭಿಕ ಶಿಲ್ಕು ರೂ.988.59 ಕೋಟಿಗಳಿದ್ದು, ಈವರವಿಗೆ 3 ಕಂತುಗಳ ಅನುದಾನ ರೂ.440.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ ಪಿಡಿ ಖಾತೆಯಲ್ಲಿ ರೂ.1230.33ಕೋಟಿಗಳು ಲಭ್ಯವಿರುತ್ತದೆ. ಈವರೆವಿಗೆ ರೂ.621.26 ಕೋಟಿಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ರೂ.455.19 ಕೋಟಿಗಳ ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳು / ಉಪ ವಿಭಾಗಾಧಿಕಾರಿಗಳು ಮಾನ್ಯ ಶಾಸಕರುಗಳಿಂದ ಪ್ರಸ್ತಾವನೆ ಪಡೆದು ಅನುಮೋದನೆ ನೀಡುವುದು ಬಾಕಿಯಿರುತ್ತದೆ. ಆದ್ದರಿಂದ, ಎಲ್ಲಾ ಜಿಲ್ಲಾಧಿಕಾರಿಗಳಿಗೆ / ಉಪ ವಿಭಾಗಾಧಿಕಾರಿಗಳಿಗೆ ಪ್ರಸಕ್ತ ಮಾಹೆಯಲ್ಲಿ ರೂ.1000.00 ಕೋಟಿಗಳನ್ನು ವೆಚ್ಚ ಮಾಡಲು 2023-24ನೇ ಸಾಲಿನಲ್ಲಿ ಅನುಮೋದನೆ ನೀಡಲು ಬಾಕಿಯಿರುವ ರೂ.173.00 ಕೋಟಿಗಳು 2024-25ನೇ ಸಾಲಿನಲ್ಲಿ ಬಾಕಿ ಇರುವ ರೂ.519.50 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ಕಾರಮಗಾರಿಗಳನ್ನು ಪ್ರಾರಂಭ ಮಾಡಲು ಸೂಚನೆ ನೀಡಲಾಗಿದೆ.

ಮಾನ್ಯ ಶಾಸಕರಾದ ಶ್ರೀ. ಎಂ. ನಾಗರಾಜುರವರು ಪ್ರಸ್ತಾಪಿಸಿರುವಂತೆ, ಕೆಲ್ಯಾಡ್ಸ್ ಯೋಜನೆಯ ಪ್ರಗತಿ ಪರಿಶೀಲನೆ ದಾಖಲೀಕರಣ ಹಾಗೂ ಕ್ರಿಯಾಯೋಜನೆ ಅನುಮೋದನೆ ಅನುದಾನ ಬಿಡುಗಡೆ ಮುಂತಾದ ಎಲ್ಲಾ ಪ್ರಕ್ರಿಯೆಗಳು ಒಳಗೊಂಡಂತೆ **"ಕೆಲ್ಯಾಡ್ಸ್ ಯೋಜನೆಯ ತಂತ್ರಾಂಶವನ್ನು NIC ಮೂಲಕ ಅಭಿವೃದ್ಧಿ ಪಡಿಸಲಾಗಿದೆ"**. ಸದರಿ ತಂತ್ರಾಂಶವನ್ನು 2025ರ ಜನವರಿಯಲ್ಲಿ ಲೋಕಾರ್ಪಣೆಗೊಳಿಸಲು ಉದ್ದೇಶಿಸಲಾಗಿದೆ. ಇದರಿಂದ ಕ್ಷೇತ್ರದ ಶಾಸಕರಿಗೆ ಮತ್ತು ರಾಜ್ಯದ ಜನರಿಗೆ ಕೆಲ್ಯಾಡ್ಸ್ ಯೋಜನೆಯ ಪೂರ್ಣ ಮಾಹಿತಿ ಲಭ್ಯವಾಗುವಂತ ವ್ಯವಸ್ಥೆ ಮಾಡಲಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಶಾಸಕರ ಗಮನಕ್ಕೆ ತರಬಯಸುತ್ತೇನೆ.

ಸಂಖ್ಯೆ : ಪಿಡಿಎಸ್/92/ಕೆಎಲ್ಎಸ್/2024

**(ಡಿ. ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು